ಆ) ಇವರೆಲ್ಲರಿಗೂ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತಿದೆಯೇ ?

ಇ) ಹಾಗಿದ್ದಲ್ಲಿ, ಈ ರೀತಿ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿರುವುದರಿಂದ ವಿದ್ಯುಚ್ಛಕ್ತಿ ಮಂಡಳಿಗೆ ಉಂಟಾಗುತ್ತಿರುವ ನಷ್ಟವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ದಿನಾಂಕ ೩೧–೧೦–೧೯೬೬ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿದ್ದ ನೌಕರರ ಸಂಖ್ಯೆ ೩೯೦೩೪.

ಆ) ೧೯೬೬ ರ ಜನವರಿ ವೇಳೆಗೆ ಸುಮಾರು ೧೨,೦೦೦ ನೌಕರರು ಉಚಿತ ವಿದ್ಯುತ್ (ತಲಾ ೨೦೦ ಯೂನಿಟ್ಟುಗಳಷ್ಟು)ಸೌಲಭ್ಯ ಪಡೆಯುತ್ತಿದ್ದರು. ಇತ್ತೀಚಿನ ಸಂಖ್ಯೆಯು ವಿವರ ಸಂಗ್ರಹಿಸಲಾಗುತ್ತಿದೆ.

ಇ) ಆರ್‌ಬಿಟ್ರೇಟರ್ ನಿರ್ಣಯದಂತೆ ನೌಕರರಿಗೆ ೨೦೦ ಯೂನಿಟ್ಟುಗಳಷ್ಟು ಉಚಿತ ವಿದ್ಯುತ್ ಒದಗಿಸಲಾಗುತ್ತಿದೆ. ಇದು ಅವರಿಗೆ ಕೊಡುವ ಒಂದು ಸೌಲಭ್ಯ. ಆದಕಾರಣ ಇದನ್ನು ನಷ್ಟವೆಂದು ಪರಿಗಣಿಸಲಾಗುವುದಿಲ್ಲ.

ವಿದ್ಯುಚ್ಛಕ್ತಿ ಮಂಡಳಿಯಲ್ಲಿ ದಿನಗೂಲಿ ಗುಮಾಸ್ತರ ನೇಮಕದ ಬಗ್ಗೆ

೧೨೭೯. ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).— ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿದ್ಯುಚ್ಛಕ್ತಿ ಇಲಾಖೆಯಲ್ಲಿ ತಾತ್ಕಾಲಿಕ ಗುಮಾಸ್ತರಾಗಿ ೨೪೦ ದಿವಸಗಳ ಸೇವೆ ಸಲ್ಲಿಸಿದ ಅಭ್ಯರ್ಥಿಗಳನ್ನು ಆ ಹುದ್ದೆಯಿಂದ ವಜಾಗೊಳಿಸಲು ಕಾರಣವೇನು?

ಆ) ಗುಮಾಸ್ತ ಹುದ್ದೆಗೆ ಬೇರೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಮಯದಲ್ಲಿ ಈ ಅಭ್ಯರ್ಥಿಗಳು ಸದರಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದರೂ ಸಂದರ್ಶನ ಪತ್ರ ಕಳುಹಿಸದಿರಲು ಕಾರಣಗಳೇನು?

ಇ) ಸದರಿ ಹುದ್ದೆಗೆ ಆಯ್ಕೆ ಮಾಡುವಲ್ಲಿ ಈ ಹಿಂದೆ ೨೪೦ ದಿನವೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಹಂಗಾಮಿ ಗುಮಾಸ್ತರ ಹುದ್ದೆಯಲ್ಲಿ ಕೆಲಸ ನಿರ್ವಹಿಸಿದ ಮತ್ತು ಅನುಭವವಿದ್ದ ಅಭ್ಯರ್ಥಿಗಳ ಬಗ್ಗೆ ಮಂಡಳಿಯು ತಾರತಮ್ಯ ತೋರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಂಗಾಮಿ ಗುಮಾಸ್ತರ ನೆಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಈ ಹಿಂದೆ ಸೇವೆ ಸಲ್ಲಿಸಿದ ಅಭ್ಯರ್ಥಿಗಳನ್ನು ಇನ್ನು ಮುಂದಾದರೂ ನೇಮಕ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಉ) ಹಾಗಿದ್ದಲ್ಲಿ, ಸದ್ರಿ ಅಭ್ಯರ್ಥಿಗಳನ್ನು ಯಾವಾಗ ನೇಮಕ ಮಾಡಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್. (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು):—

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ತಾತ್ಕಾಲಿಕ ಗುಮಾಸ್ತರನ್ನಾಗಿ ಯಾರನ್ನೂ ನೇಮಿಸಿಕೊಂಡಿಲ್ಲ. ಹೊಸ ಲೆಡ್ಜರು ಲೆಕ್ಕಗಳನ್ನು ತೆರೆಯುವುದರ ಸಲುವಾಗಿ ೨೧ ವಿದ್ಯಾವಂತ ಜನರನ್ನು ತಾತ್ಕಾಲಿಕವಾಗಿ, ದಿನಗೂಲಿಯ ಮೇರೆಗೆ (ಡೈಲಿ ರೇಟೆಡ್ ವರ್ಕರ್ಸ್) ಮಂಗಳೂರು ಮತ್ತು ಉಡುಪಿ ವಿಭಾಗ ಕಛೇರಿಗಳಲ್ಲಿ ನೇಮಿಸಿಕೊಳ್ಳಲಾಗಿತ್ತು. ೨೪೦ ದಿನ ಪೂರ್ಣಗೊಳ್ಳುವ ಮೊದಲು ಲೆಡ್ಜರ್ ಲೆಕ್ಕದ ಕೆಲಸ ಮುಗಿದ ನಂತರ ಇವರನ್ನು ತೆಗೆದುಹಾಕಲಾಯಿತು.

ಆ) ಮಂಡಳಿಯು ನೇಮಕ ಮತ್ತು ವರ್ಗಾವಣೆ ನಿಯಮಾವಳಿಗಳ ಅನ್ವಯ ಸಂದರ್ಶನ ಪತ್ರಗಳನ್ನು ಅಭ್ಯರ್ಥಿಗಳಿಗೆ ಕಳುಹಿಸಲಾಗಿದೆ.

ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ತಯಾರಿಸಿದ ಪಟ್ಟಿಯಿಂದ ೧:೧೫ರ ಪ್ರಮಾಣದಲ್ಲಿ ಅಭ್ಯರ್ಥಿಗಳಿಗೆ ಸಂದರ್ಶನ ಪತ್ರಗಳನ್ನು ಕಳುಹಿಸಲಾಗಿತ್ತು. ಮಂಗಳೂರು ವಿಭಾಗ ಕಛೇರಿಯಲ್ಲಿ ದಿನಗೂಲಿಯ ಮೇಲೆ ನೇಮಿತರಾಗಿದ್ದ ೧೧ ಜನರಲ್ಲಿ ಒಬ್ಬರು ಮಾತ್ರ ಸೆಲೆಕ್ಷನ್ ಸಮಿತಿಯ ಮುಂದೆ ಸಂದರ್ಶನ ಪಡೆಯುವಲ್ಲಿ ಅರ್ಹತೆ ಹೊಂದಿದ್ದರು ಈ ಅಭ್ಯರ್ಥಿಯು ಆಯ್ಕೆ ಆಗಿರುವುದಿಲ್ಲ

ಉಡುಪಿ ವಿಭಾಗ ಕಛೇರಿಯ ದಿನಗೂಲಿಯ ಮೇಲೆ ನೇಮಕಗೊಂಡಿದ್ದ ೧೦ ಜನರಲ್ಲಿ ಮೂವರು ಸೆಲೆಕ್ಷನ್ ಸಮಿತಿಯ ಮುಂದೆ ಸಂದರ್ಶನ ಪಡೆಯಲು ಅರ್ಹತೆ ಹೊಂದಿದ್ದರು. ಈ ಮೂವರಿಗೂ ಸಂದರ್ಶನ ನೀಡಲಾಯಿತು. ಮತ್ತು ಈ ವಿಭಾಗದಲ್ಲಿ ಇಬ್ಬರಿಗೆ ನೇಮಕ ಮಾಡಲಾಗಿದೆ.

ಇ) ಈ ೭೧ ಜನರನ್ನು ಡೈಲಿರೇಟೆಡ್ ಕೆಲಸಗಾರರನ್ನಾಗಿ ನೇಮಿಸಿಕೊಳ್ಳಲಾಗಿತ್ತು. ೨೪೦ ದಿನಗಳಿಗೆ ಮೊದಲೇ ಅವರನ್ನು ಕೆಲಸದಿಂದ ಬಿಡುಗಡೆ ಮಾಡಲಾಯಿತು.

ಈ) ಮತ್ತು ಉ) ಮೇಲಿನ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ವರಾಹಿ ಜಲ ವಿದ್ಯುತ್ ಯೋಜನೆ ಬಗ್ಗೆ

೧೭೮೨. ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ವರಾಹಿ ವಿದ್ಯುತ್ ಯೋಜನೆಯ ಕಾರ್ಯ ಪ್ರಾರಂಭವಾಗಿ ಎಷ್ಟು ವರ್ಷಗಳಾದವು?

೨) ಈ ಜಲ ವಿದ್ಯುತ್ ಯೋಜನಾ ಸಮೂಹದ ಅಂದಾಜು ವೆಚ್ಚ ಎಷ್ಟು?

೩) ಈ ಜಲ ವಿದ್ಯುತ್ ಯೋಜನೆಗಾಗಿ ಈವರೆಗೆ ಖರ್ಚು ಮಾಡಿದ ಹಣವೆಷ್ಟು?

೪) ಈ ಜಲ ವಿದ್ಯುತ್ ಯೋಜನಾ ಕಾರ್ಯ ಸಂಪೂರ್ಣಗೊಂಡು ವಿದ್ಯುಚ್ಛಕ್ತಿಯ ಗರಿಷ್ಠ ಉತ್ಪಾದನೆಯನ್ನು ಮುಟ್ಟಲು ಇನ್ನೂ ಎಷ್ಟು ವರ್ಷಗಳು ಬೇಕಾಗುವುವು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

೧) ಈ ಯೋಜನೆಯ ಕಾರ್ಯ ಪ್ರಾರಂಭವಾಗಿ ೮ ವರ್ಷಗಳಾದವು.

೨) ಈ ಯೋಜನಾ ಸಮೂಹದ ಅಂದಾಜು ವೆಚ್ಚ ೧೯೧.೭೦ ಕೋಟಿ ರೂಪಾಯಿಗಳು.

೩) ೮೭ರ ಜನವರಿ ಕೊನೆಗೆ ಖರ್ಚು ಮಾಡಿದ ಹಣ ೧೪೨.೬೫ ಕೋಟಿ ರೂಪಾಯಿಗಳು.

೪) ಈ ಯೋಜನೆಯ ಕಾರ್ಯಗಳು ೧೯೮೮-೮೯ರಲ್ಲಿ ಪೂರ್ಣಗೊಂಡು ವಿದ್ಯುಚ್ಛಕ್ತಿ ಪ್ರಾರಂಭವಾಗುವುದು. ಮತ್ತು ಮುಂದಿನ ಆರು ತಿಂಗಳಲ್ಲಿ ಅದು ಗರಿಷ್ಠ ಮಟ್ಟವನ್ನು ತಲುಪುವುದು.

ಕುಲಶೇಖರದ ಕೆ.ಎಂ.ಎಫ್‌ನ ಕೊಳೆಯನ್ನು ಒಳಚರಂಡಿಗೆ ಬಿಡುವ ಬಗ್ಗೆ

೧೫೫೩. ಶ್ರೀ ಎನ್. ಎಂ. ಆಡ್ಯಂತಾಯ (ಸುರತ್ಕಲ್).— ಮಾನ್ಯ ರೇಷ್ಮೆ, ಪಶುಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಲಶೇಖರದಲ್ಲಿರುವ ಕೆ.ಎಂ.ಎಫ್‌ನ ಮಂಗಳೂರು ಡೈರಿಯ ಕೊಳೆಯನ್ನು ಒಳಚರಂಡಿಗೆ ಬಿಡುವ ವ್ಯವಸ್ಥೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಮೇಲ್ಕಂಡ ಕೊಳೆಯನ್ನು ಒಳಚರಂಡಿಗೆ ಬಿಡದಿರುವುದರಿಂದ ಡೈರಿಯ ಪರಿಸರ ಕುಲಶೇಖರ ಮತ್ತು ಪದವು ಗ್ರಾಮಗಳ ಕೋಟಿಮುರಿ, ಮೆಲ್ಕೊಟೆ ಉಮ್ಮಿನಕಾನ ವಠಾರಗಳಲ್ಲಿ ನೆಲಸಿರುವ ೨೦೦೦ ಜನರ ಆರೋಗ್ಯಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?